# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಬುಧವಾರ, ೩೧, ಡಿಸೆಂಬರ್, ೨೦೨೫ (ಪುಷ್ಯ, ೧೦, ಶಕವರ್ಷ, ೧೯೪೭)<br>BENGALURU, WEDNESDAY, 31, DECEMBER, 2025 ( PUSHYA , 10, SHAKAVARSHA, 1947) | ನಂ. ೮೪೬<br>No. 846 |
|---|---|---|

## ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 322 ಮೈಅಪ್ರಾ 2024(ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, 4ನೇ ಮಹಡಿ,
ಡಾ. ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:31.12.2025

## ಅಧಿಸೂಚನೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 145 ಎಂಐಬಿ 98, ದಿನಾಂಕ-27-05-1998 ರನ್ವಯ ಘೋಷಿಸಲಾಗಿರುವ ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕು, ವಿರಾಜಪೇಟೆ ಪುರಸಭೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 4(ಎ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಹಾಲಿ ಸ್ಥಳೀಯ ಯೋಜನಾ ಪ್ರದೇಶವನ್ನು ಒಳಗೊಂಡಂತೆ, 10 ಗ್ರಾಮಗಳನ್ನು ಸೇರಿಸಿ, ಹಾಲಿ ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸಲಾಗಿದೆ. ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ವಿವರಗಳನ್ನು **ಅನುಬಂಧ-ಎ** ರಲ್ಲಿ ಹಾಗೂ ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯ ವಿವರಗಳನ್ನು **ಅನುಬಂಧ-ಬಿ** ರಲ್ಲಿ ನಮೂದಿಸಲಾಗಿದೆ.

ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಈ ಕೆಳಕಂಡ ಅಂಶಗಳನ್ನು ಅನುಸರಿಸತಕ್ಕದ್ದು.

1. ವಿಸ್ತರಿಸಲಾದ ಸ್ಥಳೀಯ ಯೋಜನಾ ಪ್ರದೇಶವನ್ನು ವ್ಯವಸಾಯ ವಲಯವೆಂದು ಪರಿಗಣಿಸಿ, ಅನುಮೋದಿತ ಮಹಾಯೋಜನೆಯ ವ್ಯವಸಾಯ ವಲಯಕ್ಕೆ ಅನ್ವಯವಾಗುವ ವಲಯ ನಿಯಮಾವಳಿಗಳ ಅವಕಾಶಗಳಂತೆ ಅಭಿವೃದ್ಧಿಗಳನ್ನು ಅನುಮತಿಸುವುದು.

2. ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶದಲ್ಲಿನ ಜಮೀನುಗಳಿಗೆ ಸಂಬಂಧಪಟ್ಟಂತೆ ಸರ್ಕಾರವು ಹೊರಡಿಸಿರುವ ಆದೇಶಗಳು ಹಾಗೂ ಸ್ಥಳೀಯ ಯೋಜನಾ ಪ್ರದೇಶ ವಿಸ್ತರಿಸಿ ಆದೇಶ ಹೊರಡಿಸಿದ ಪೂರ್ವದಲ್ಲಿ ಕಂದಾಯ ಇಲಾಖೆಯಿಂದ ಭೂ ಪರಿವರ್ತಿಸಲು ಹೊರಡಿಸಿದ ಚಾಲ್ತಿಯಲ್ಲಿರುವ ಆದೇಶಗಳನ್ನು ಮತ್ತು ಸಕ್ಷಮ ಪ್ರಾಧಿಕಾರದಿಂದ ಪಡೆದು ವಿನ್ಯಾಸ ಅನುಮೋದನೆ ಅನುಸಾರ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಪರಿಗಣಿಸತಕ್ಕದ್ದು.

3. ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶಗಳ ವ್ಯಾಪ್ತಿಯ ಮಹಾಯೋಜನೆಗೆ ಸರ್ಕಾರದಿಂದ ಅಂತಿಮ ಅನುಮೋದನೆ ನೀಡುವವರೆಗೆ ವ್ಯವಸಾಯ ವಲಯದಲ್ಲಿರುವುದರಿಂದ ಭೂ ಪರಿವರ್ತನೆಗಳ ಪ್ರಸ್ತಾವನೆಗಳಿಗೆ ವಲಯ ನಿಯಮಾವಳಿಯಲ್ಲಿರುವ ಅವಕಾಶದಂತೆ ಕ್ರಮ ಜರುಗಿಸತಕ್ಕದ್ದು.

4. ಭೂ ಪರಿವರ್ತನೆ ಹಾಗೂ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಗಳು ಪ್ರಾಧಿಕಾರವು ತಯಾರಿಸಬೇಕಾಗಿರುವ ಮಹಾಯೋಜನೆಗೆ ಪೂರಕವಾಗಿರುವ ಬಗ್ಗೆ ಮತ್ತು ಯೋಜನಾ ಬದ್ಧವಾಗಿರುವ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಕ್ರಮ ಜರುಗಿಸತಕ್ಕದ್ದು.

5. ಗ್ರಾಮಠಾಣೆ ಕ್ಷೇತ್ರಗಳಿಗೆ ಹೊಂದಿಕೊಂಡಂತಹ ಸ್ವಾಭಾವಿಕವಾಗಿ ಬೆಳವಣಿಗೆಗಳಾಗುವ ವ್ಯಾಪ್ತಿಯಲ್ಲಿ ಅಂದರೆ ಗ್ರಾಮಠಾಣಾ ಸುತ್ತಲಿನ 250.0ಮೀ. ತ್ರಿಜ್ಯದಲ್ಲಿನ ಪ್ರದೇಶದಲ್ಲಿ ಚಾಲ್ತಿ ಮಹಾಯೋಜನೆಯ ಅನುಮೋದಿತ ವಲಯ ನಿಯಮಗಳಲ್ಲಿನ ಅವಕಾಶಗಳಂತೆ ಅನುಮೋದನೆಗಳನ್ನು ನೀಡತಕ್ಕದ್ದು.

6. ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶ ಘೋಷಿಸಿದ ದಿನಾಂಕದಿಂದ 02 ವರ್ಷದ ಒಳಗಾಗಿ ಮಹಾಯೋಜನೆಯನ್ನು ಸಿದ್ಧಪಡಿಸಿ ಸರ್ಕಾರದ ತಾತ್ಕಾಲಿಕ ಅನುಮೋದನೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಲತಾ.ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

## ಅನುಬಂಧ-ಎ

### ವಿರಾಜಪೇಟೆ ಪ್ರಸ್ತಾವಿತ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ವಿವರ

| ಕ್ರ. ಸಂ. | ಗ್ರಾಮದ ಹೆಸರು | ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಷರಾ |
|---|---|---|---|
| 01 | ಐಮಂಗಲ | 293.62 | ಪೂರ್ಣ ಕಂದಾಯ ಗ್ರಾಮ |
| 02 | ಅಂಬಟ್ಟಿ | 289.29 | ಪೂರ್ಣ ಕಂದಾಯ ಗ್ರಾಮ |
| 03 | ಆರ್ಜಿ | 949.77 | ಪೂರ್ಣ ಕಂದಾಯ ಗ್ರಾಮ |
| 04 | ಬಾಳುಗೋಡು | 642.01 | ಪೂರ್ಣ ಕಂದಾಯ ಗ್ರಾಮ |
| 05 | ಬೇಟೋಳಿ | 990.60 | ಪೂರ್ಣ ಕಂದಾಯ ಗ್ರಾಮ |
| 06 | ಬಿಟ್ಟಂಗಾಲ | 715.97 | ಪೂರ್ಣ ಕಂದಾಯ ಗ್ರಾಮ |
| 07 | ಕದನೂರು | 449.93 | ಪೂರ್ಣ ಕಂದಾಯ ಗ್ರಾಮ |
| 08 | ಕೊಟ್ಟೋಳಿ | 500.51 | ಪೂರ್ಣ ಕಂದಾಯ ಗ್ರಾಮ |
| 09 | ಕುಕ್ಲೂರು | 577.91 | ಪೂರ್ಣ ಕಂದಾಯ ಗ್ರಾಮ |
| 10 | ಮಗ್ಗುಲ | 620.46 | ಪೂರ್ಣ ಕಂದಾಯ ಗ್ರಾಮ |
| | **ಒಟ್ಟು** | **6030.07ಹೆ** | |

**(ಲತಾ.ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

## ಅನುಬಂಧ-ಬಿ

ವಿರಾಜಪೇಟೆ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯು ಐಮಂಗಲ ಗ್ರಾಮದ ಸ.ನಂ. 19ರ ಆಗ್ನೇಯ ಮೂಲೆಯಲ್ಲಿ ಸಿದ್ದಾಪುರ ಗ್ರಾಮಕ್ಕೆ ಹೋಗುವ ರಾಜ್ಯ ಹೆದ್ದಾರಿ (SH-91) ನ್ನು ಛೇದಿಸಿಕೊಂಡು ಸರ್ವೆ ನಂ. 145, 147/1, 148/2, 148/3, 148/1, 149, 150, 182, 183, 194/4, 184/1, 199/1, 199/3 ರ ಪೂರ್ವದ ಗಡಿಯಲ್ಲಿ ಆಗ್ನೇಯಾಭಿಮುಖವಾಗಿ ಸಾಗಿ ಸರ್ವೆ ನಂ. 199/3 ರ ಆಗ್ನೇಯ ಗಡಿಯನ್ನು ತಲುಪಿ ಅದೇ ಸರ್ವೆ ನಂ ನಲ್ಲಿ ನೈರುತ್ಯಾಭಿಮುಖವಾಗಿ ಸರ್ವೆ ನಂ. 199/7, 199/8, 195/2 ರ ಪೂರ್ವದ ಗಡಿಯಲ್ಲಿ ಸಾಗಿ ಮಗ್ಗುಲ ಗ್ರಾಮದ ಸರ್ವೆ ನಂ. 09 ರ ಈಶಾನ್ಯ ಮೂಲೆಯನ್ನು ತಲುಪುತ್ತದೆ. ನಂತರ ಸರ್ವೆ ನಂ. 09, 10 ರ ಪೂರ್ವದ ಗಡಿಯಲ್ಲಿ ನೈರುತ್ಯಾಭಿಮುಖವಾಗಿ ಸಾಗಿ ಇದೇ ಗ್ರಾಮದ ಸರ್ವೆ ನಂ. 17 ರ ಉತ್ತರ ಗಡಿಯನ್ನು ತಲುಪಿ, ಸ.ನಂ. 17 ರ ಗಡಿಯಲ್ಲಿ ಆಗ್ನೇಯಾಭಿಮುಖವಾಗಿ ಸಾಗಿ ಸರ್ವೆ ನಂ. 18, 27, 29, 32, 31 ರ ಉತ್ತರ ಗಡಿಯಲ್ಲಿ ಸಾಗಿ ಸರ್ವೆ ನಂ. 31 ರ ಈಶಾನ್ಯ ಮೂಲೆಯನ್ನು ತಲುಪುತ್ತದೆ. ನಂತರ ಸರ್ವೆ ನಂ. 31, 32, 38, 39 ರ ಪೂರ್ವದ ಗಡಿಯಲ್ಲಿ ದಕ್ಷಿಣಾಭಿಮುಖವಾಗಿ ಸಾಗಿ ಸರ್ವೆ ನಂ. 44 ವಾಯುವ್ಯ ಮೂಲೆಯನ್ನು ತಲುಪುತ್ತದೆ. ನಂತರ ಇದೇ ಸರ್ವೆ ನಂ. 44 ರ ಗಡಿಯಲ್ಲಿ ಸಾಗಿ ಹಳ್ಳದ ಗಡಿಯನ್ನು ಆವರಿಸಿಕೊಂಡು ಮಗ್ಗುಲ ಗ್ರಾಮದ ಸರ್ವೆ ನಂ. 51 ರ ಆಗ್ನೇಯ ಹಾಗೂ ಬಿಟ್ಟಂಗಾಲ ಗ್ರಾಮದ ಸರ್ವೆ ನಂ. 09ರ ಈಶಾನ್ಯ ಗಡಿಯನ್ನು ತಲುಪುತ್ತದೆ. ನಂತರ ಸರ್ವೆ ನಂ.10/1, 10/2, 11, 14, 15, 16, 18, 17ರ ಉತ್ತರ ಗಡಿಯಲ್ಲಿ ಪೂರ್ವಾಭಿಮುಖವಾಗಿ ಸರ್ವೆ ನಂ.17, 18, 100, 101/2 ರ ಪೂರ್ವದ ಗಡಿಯಲ್ಲಿ ಆಗ್ನೇಯಾಭಿಮುಖವಾಗಿ ಸಾಗಿ ರಸ್ತೆಯನ್ನು ಛೇಧಿಸಿಕೊಂಡು ಸರ್ವೆ ನಂ. 102 ರ ಉತ್ತರದ ಗಡಿಯನ್ನು ತಲುಪುತ್ತದೆ. ನಂತರ ಸರ್ವೆ ನಂ. 114 ರ ದಕ್ಷಿಣದ ಬಿಂದುವನ್ನು ತಲುಪಿ ನೈರುತ್ಯಾಭಿಮುಖವಾಗಿ ಸರ್ವೆ ನಂ. 115/1, 134/1, 134/2, 135/2, 135/3, 135/1, 331, 137/2, 137/1 ರ ದಕ್ಷಿಣದ ಗಡಿಯಲ್ಲಿ ಸಾಗಿ ಸರ್ವೆ ನಂ. 137/1 ರ ದಕ್ಷಿಣದ ಗಡಿಯನ್ನು ತಲುಪುತ್ತದೆ. ನಂತರ ಬಿಟ್ಟಂಗಾಲ ಗ್ರಾಮದ ಗಡಿಯೊಂದಿಗೆ ದಕ್ಷಿಣಾಭಿಮುಖವಾಗಿ ಸರ್ವೆ ನಂ. 138/1, 224, ರಸ್ತೆ, 225/1, 343, 225/2 ರ ಪೂರ್ವದ ಗಡಿಯಲ್ಲಿ ಸಾಗಿ ರಾಜ್ಯ ಹೆದ್ದಾರಿ 90 ನ್ನು ಛೇದಿಸಿಕೊಂಡು ಸರ್ವೆ ನಂ.318, 316, 319 ರ ಪೂರ್ವದ ಗಡಿಯಲ್ಲಿ ದಕ್ಷಿಣಾಭಿಮುಖವಾಗಿ ಸಾಗಿ ಸರ್ವೆ ನಂ.325/14, 325/7, 325/11 ರ ಉತ್ತರದ ಗಡಿಯೊಂದಿಗೆ ಸಾಗಿ ಸರ್ವೆ ನಂ.323ರ ಪೂರ್ವದ ಗಡಿಯನ್ನು ತಲುಪುತ್ತದೆ. ನಂತರ ದಕ್ಷಿಣಾಭಿಮುಖವಾಗಿ ಸರ್ವೆ ನಂ. 323, 324 ರ ಪೂರ್ವದ ಗಡಿಯಲ್ಲಿ ಸಾಗಿ ಸರ್ವೆ ನಂ.324 ರ ದಕ್ಷಿಣ ಗಡಿಯನ್ನು ತಲುಪುತ್ತದೆ. ನಂತರ ಪಶ್ಚಿಮಾಭಿಮುಖವಾಗಿ ಸರ್ವೆ ನಂ. 324, 325, 325/1, 326, 327/1, 328 ರ ದಕ್ಷಿಣ ಗಡಿಯಲ್ಲಿ ಸಾಗಿ 327/1 ನೈರುತ್ಯ ಗಡಿಯನ್ನು ತಲುಪುತ್ತದೆ. ನಂತರ ಉತ್ತರಾಭಿಮುಖವಾಗಿ ಸ.ನಂ 327/13, 327/12ರ ಗಡಿಯಲ್ಲಿ ಸಾಗಿ ರಸ್ತೆಯನ್ನು ದಾಟಿಕೊಂಡು ಸ.ನಂ 310ರ ದಕ್ಷಿಣ ಗಡಿಯನ್ನು ತಲುಪುತ್ತದೆ. ನಂತರ 310 ರ ದಕ್ಷಿಣ ಗಡಿಯಲ್ಲಿ ಪಶ್ಚಿಮಾಭಿಮುಖವಾಗಿ 310, 309, 308/3, 297, 237, 291, 298/25, 295, 337, 330, 293, 293/3, 289, 290 ರಾಜ್ಯ ಹೆದ್ದಾರಿ 90 ನ್ನು ದಾಟಿಕೊಂಡು ಸರ್ವೆ ನಂ. 259, ರಸ್ತೆ, ಸ.ನಂ. 351ನ್ನು ತಲುಪಿ ಬಾಳುಗೋಡು ಗ್ರಾಮದ ಗಡಿಯನ್ನು ಪ್ರವೇಶಿಸುತ್ತದೆ. ನಂತರದಲ್ಲಿ ಪಶ್ಚಿಮಾಭಿಮುಖವಾಗಿ ಹಳ್ಳ, ಸರ್ವೆ ನಂ. 49ರ ದಕ್ಷಿಣ ಗಡಿಯಲ್ಲಿ ಸಾಗಿ ಗೋಣಿಕೊಪ್ಪ ಹೋಗುವ ರಾಜ್ಯ ಹೆದ್ದಾರಿ (SH-90) ನ್ನು ಛೇಧಿಸಿಕೊಂಡು ಪಶ್ಚಿಮಾಭಿಮುಖವಾಗಿ ಸರ್ವೆ ನಂ. 304ರ ಪೂರ್ವದ ಗಡಿಯಲ್ಲಿ ಸಾಗಿ ಸರ್ವೆ ನಂ 305, 312, 314, ಹಳ್ಳ, ಹಳ್ಳದ ದಕ್ಷಿಣ ಗಡಿಯಲ್ಲಿ ಸಾಗಿ ಸರ್ವೆ ನಂ 314, 320, 321 ರ ದಕ್ಷಿಣ ಗಡಿಯಲ್ಲಿ ಪಶ್ಚಿಮಾಭಿಮುಖವಾಗಿ ಸಾಗಿ ಸರ್ವೆ ನಂ.324ರ ಆಗ್ನೇಯ ಮೂಲೆ ಹಾಗೂ ಹಳ್ಳದ ಉತ್ತರ ಬಿಂದುವನ್ನು ತಲುಪುತ್ತದೆ. ನಂತರ ಹಳ್ಳದ ದಕ್ಷಿಣದ

ಗಡಿಯಲ್ಲಿ ಪಶ್ಚಿಮಾಭಿಮುಖವಾಗಿ ಸಾಗಿ ಸರ್ವೆ ನಂ. 328, ರಸ್ತೆ, 330, 331, 332ರ ದಕ್ಷಿಣ ಸರಹದ್ದಿನಲ್ಲಿ ಸಾಗಿ ಸರ್ವೆ ನಂ.333ರ ಪೂರ್ವಮೂಲೆಯನ್ನು ತಲುಪುತ್ತದೆ. ನಂತರ ಸರ್ವೆ ನಂ.333, ಸರ್ವೆ ನಂ.334ರ ಪೂರ್ವಕ್ಕೆ ಇರುವ ಹಳ್ಳ, 335, 336, 337ರ ಪೂರ್ವದ ಗಡಿಯಲ್ಲಿ ದಕ್ಷಿಣಾಭಿಮುಖವಾಗಿ ಸಾಗಿ ಸರ್ವೆ ನಂ.337/1 ರ ಆಗ್ನೇಯ ಬಿಂದುವಿನಲ್ಲಿ ನೈರುತ್ಯಾಭಿಮುಖವಾಗಿ ಸರ್ವೆ ನಂ. 337/1, 337/20, 337/44, 337/45 ರ ಗಡಿಯಲ್ಲಿ ಸಾಗಿ ಸರ್ವೆ ನಂ 337/45 ರ ನೈರುತ್ಯ ಮೂಲೆಯಲ್ಲಿ ಆರ್ಜಿ ಗ್ರಾಮದ ಗಡಿಯನ್ನು ತಲುಪುತ್ತದೆ. ಆರ್ಜಿ ಗ್ರಾಮದ ಸರ್ವೆ ನಂ 369/1ರ ಆಗ್ನೇಯ ಮೂಲೆಯನ್ನು ತಲುಪಿ, ನಂತರ ಪಶ್ಚಿಮಾಭಿಮುಖವಾಗಿ ಸ.ನಂ. 370, ರಸ್ತೆ, 371ರ ದಕ್ಷಿಣ ಗಡಿಯಲ್ಲಿ ಸಾಗಿ ಕೇರಳ ರಾಜ್ಯಕ್ಕೆ ಹೋಗುವ ರಾಜ್ಯ ಹೆದ್ದಾರಿ(SH-91)ನ್ನು ದಾಟಿ ಸ.ನಂ. 371ರ ಗಡಿಯೊಂದಿಗೆ ಸ.ನಂ. 333/1ರ ನೈರುತ್ಯ ಬಿಂದುವನ್ನು ತಲುಪಿ, ಸರ್ವೆ ನಂ.333/1 ರ ಪಶ್ಚಿಮಗಡಿಯಲ್ಲಿ ಉತ್ತರಾಭಿಮುಖವಾಗಿ ಸರ್ವೆ ನಂ. 333/1, ರಸ್ತೆ, 333/25, 333/1 ರ ಪಶ್ಚಿಮ ಗಡಿಯಲ್ಲಿ ಸಾಗಿ ಬೇಟೋಳಿ ಗ್ರಾಮದ ಸ.ನಂ. 436/1ರ ದಕ್ಷಿಣ ಬಿಂದುವನ್ನು ತಲುಪುತ್ತದೆ. ನಂತರ ಇದೇ ಗ್ರಾಮದ ರಸ್ತೆ, ಸ.ನಂ 320/4, ಹಳ್ಳ, 318/3, 121/2ರ ದಕ್ಷಿಣದ ಗಡಿಯಲ್ಲಿ ಪಶ್ಚಿಮಾಭಿಮುಖವಾಗಿ ಸಾಗಿ ಸರ್ವೆ ನಂ 121/2 ರ ದಕ್ಷಿಣ ಮೂಲೆಯಲ್ಲಿ ಉತ್ತರಕ್ಕೆ ತಿರುಗಿ ಸರ್ವೆ ನಂ.121/2, 120/4, 120/2, ಹಳ್ಳ, 315/1, 315/2, 313, 304/2, 303, 302ರ ಪಶ್ಚಿಮದ ಗಡಿಯಲ್ಲಿ ವಾಯುವ್ಯಾಭಿಮುಖವಾಗಿ ಸಾಗಿ ಸರ್ವೆ ನಂ.302ರ ದಕ್ಷಿಣದ ಗಡಿಯಲ್ಲಿ ಹಳ್ಳವನ್ನು ದಾಟಿ ಸರ್ವೆ ನಂ. 301, ಹಳ್ಳ, 298, 293/1 ರ ದಕ್ಷಿಣದ ಗಡಿಯಲ್ಲಿ ಪಶ್ಚಿಮಾಭಿಮುಖವಾಗಿ ಸಾಗಿ ಕೋಟ್ಟೋಳಿ ಗ್ರಾಮದ ಸ.ನಂ.230ರ ಪೂರ್ವದ ಗಡಿಯನ್ನು ತಲುಪುತ್ತದೆ. ಇದೇ ಸರ್ವೆ ನಂ.230 ಅನ್ನು ಆವರಿಸಿಕೊಂಡು ಸರ್ವೆ ನಂ.219ರ ವಾಯುವ್ಯ ಗಡಿಯನ್ನು ತಲುಪಿ ಈಶಾನ್ಯಕ್ಕೆ ತಿರುಗಿ ಸರ್ವೆ ನಂ.218, 217, 216, 215, 214 ರ ಉತ್ತರದ ಗಡಿಯಲ್ಲಿ ಪೂರ್ವಾಭಿಮುಖವಾಗಿ ಸಾಗಿ ಸರ್ವೆ ನಂ.213ರ ಪಶ್ಚಿಮದ ಬಿಂದುವನ್ನು ತಲುಪಿ ಉತ್ತರಾಭಿಮುಖವಾಗಿ ಸಾಗಿ ಸರ್ವೆ ನಂ.213, 157, ರಸ್ತೆ, 36, 35, 34, ಹಳ್ಳ, 32/3, 32/2, 32/6, 32/5, ಹಳ್ಳ, 25, ಹಳ್ಳ, 24/3 ರ ಪಶ್ಚಿಮ ಗಡಿಯಲ್ಲಿ ಸಾಗಿ ಸರ್ವೆ ನಂ 24/2, 24/5, 24/1 ನ್ನು ಆವರಿಸಿಕೊಂಡು ಸರ್ವೆ ನಂ.23, 22/2ರ ಪಶ್ಚಿಮ ಗಡಿಯಲ್ಲಿ ಉತ್ತರಕ್ಕೆ ಸಾಗಿ ಪೂರ್ವಕ್ಕೆ ತಿರುಗಿ ಸರ್ವೆ ನಂ.22/2, ಹಳ್ಳ, 23, 19, ಹಳ್ಳ, ಸರ್ವೆ ನಂ.1 ರ ಹಳ್ಳದ ಉತ್ತರ ಗಡಿಯಲ್ಲಿ ಪೂರ್ವಾಭಿಮುಖವಾಗಿ ಸಾಗಿ ಸರ್ವೆ ನಂ.2/2, 3/2ಎರ ಉತ್ತರ ಗಡಿಯಲ್ಲಿ ಸಾಗಿ ಸರ್ವೆ ನಂ.4 ರ ಪಶ್ಚಿಮ ಗಡಿಯನ್ನು ತಲುಪುತ್ತದೆ. ಸರ್ವೆ ನಂ.4 ರಲ್ಲಿ ಉತ್ತರಾಭಿಮುಖವಾಗಿ ಸಾಗಿ ಕದನೂರು ಗ್ರಾಮದ ಗಡಿಯನ್ನು ತಲುಪುತ್ತದೆ. ನಂತರ ಇದೇ ಗ್ರಾಮದ ಸರ್ವೆ ನಂ.188, ಹಳ್ಳ, 187, 172, 171, 157, 150ರ ಪಶ್ಚಿಮ ಗಡಿಯಲ್ಲಿ ಉತ್ತರಾಭಿಮುಖವಾಗಿ ಸಾಗಿ ಸರ್ವೆ ನಂ.150 ರಲ್ಲಿ ಈಶಾನ್ಯಭಿಮುಖವಾಗಿ ನದಿಯನ್ನು ದಾಟಿ, ಸರ್ವೆ ನಂ.271, 69, ನದಿ, 73 ಹಾಗೂ ನದಿಯ ಪಶ್ಚಿಮದ ಗಡಿಯಲ್ಲಿ ಸಾಗಿ ಸರ್ವೆ ನಂ.29ನ್ನು ಆವರಿಸಿಕೊಂಡು ನದಿಯ ಗಡಿಯೊಂದಿಗೆ ಸಾಗಿ ರಾಜ್ಯ ಹೆದ್ದಾರಿ(SH-27)ನ್ನು ಛೇಧಿಸಿಕೊಂಡು ಸಾಗಿ, ನದಿಯ ಹಾಗೂ ಹಳ್ಳದ ಗಡಿಯಲ್ಲಿ ಪೂರ್ವಾಭಿಮುಖವಾಗಿ ಸಾಗಿ ಸರ್ವೆ ನಂ.16 ನ್ನು ತಲುಪಿ ಸರ್ವೆ ನಂ.16, 17ರ ಉತ್ತರಗಡಿಯಲ್ಲಿ ಪೂರ್ವಾಭಿಮುಖವಾಗಿ ಸಾಗಿ ಕುಕ್ಲೂರು ಗ್ರಾಮದ ಗಡಿಯನ್ನು ತಲುಪುತ್ತದೆ. ನಂತರ ಕುಕ್ಲೂರು ಗ್ರಾಮದ ಸರ್ವೆ ನಂ.5/8, 4/3, 2/1, ಹಳ್ಳ ಮತ್ತು ಸರ್ವೆ ನಂ.1ರ ಪಶ್ಚಿಮದ ಗಡಿಯಲ್ಲಿ ಉತ್ತರಕ್ಕೆ ಸಾಗಿ ಸರ್ವೆ ನಂ.01 ರ ವಾಯುವ್ಯ ಬಿಂದುವಿನಲ್ಲಿ ಪೂರ್ವಕ್ಕೆ ತಿರುಗಿ ಸರ್ವೆ ನಂ.1, 10, 14/2, 15ರ ಉತ್ತರಗಡಿಯಲ್ಲಿ ಪೂರ್ವಾಭಿಮುಖವಾಗಿ ಸಾಗಿ ಹಳ್ಳವನ್ನು ಆವರಿಸಿಕೊಂಡು ಸರ್ವೆ ನಂ.20ರ ಪಶ್ಚಿಮ ಬಿಂದುವನ್ನು ತಲುಪುತ್ತದೆ. ನಂತರ ಸರ್ವೆ ನಂ.20, 27, 28ನ್ನು ಆವರಿಸಿಕೊಂಡು ಸರ್ವೆ ನಂ.30ರ ವಾಯುವ್ಯ ಮೂಲೆಯನ್ನು ತಲುಪುತ್ತದೆ. ಸರ್ವೆ ನಂ. 30, 31, ಹಳ್ಳ, 33, 50, ಹಳ್ಳ, 51, 51/1, 51/2, 52/3, 52/2, ಹಳ್ಳ,

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



52/2 ರ ಉತ್ತರದ ಗಡಿಯಲ್ಲಿ ಪೂರ್ವಭಿಮುಖವಾಗಿ ಸಾಗಿ, ಸರ್ವೆ ನಂ. 52/2ನ್ನು ಆವರಿಸಿಕೊಂಡು ಹಳ್ಳ, ಸರ್ವೆ ನಂ.53, 64ರ ಪೂರ್ವದ ಗಡಿಯಲ್ಲಿ ಆಗ್ನೇಯಾಭಿಮುಖವಾಗಿ ಸಾಗಿ ಐಮಂಗಲ ಗ್ರಾಮದ ಗಡಿಯನ್ನು ತಲುಪುತ್ತದೆ. ಐಮಂಗಲ ಗ್ರಾಮದ ಸರ್ವೆ ನಂ. 2/2, 2/3, 2/4, 2/1, 3/1, 4, 8, 8/3, 8/1, 9, 10, 11, 12/1, 13, 15, ಹಳ್ಳ, 16ರ ಉತ್ತರದ ಗಡಿಯಲ್ಲಿ ಪೂರ್ವಾಭಿಮುಖವಾಗಿ ಸಾಗಿ ಸರ್ವೆ ನಂ.16ರ ಈಶಾನ್ಯ ಬಿಂದುವಿನಲ್ಲಿ ದಕ್ಷಿಣಕ್ಕೆ ತಿರುಗಿ ಸರ್ವೆ ನಂ.17, ಹಳ್ಳ, ಸರ್ವೆ ನಂ.19ರ ಪೂರ್ವದ ಗಡಿಯಲ್ಲಿ ದಕ್ಷಿಣಾಭಿಮುಖವಾಗಿ ಸಾಗಿ ಪ್ರಾರಂಭದ ಬಿಂದುವನ್ನು ತಲುಪುತ್ತದೆ.

**(ಲತಾ.ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH